Ref.No. 54/2020
MW-2,

ದಿನಾಂಕಃ 18-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- 1 ನೇ ಪಾರ್ಟಿ ಪರವಾಗಿಃ ಶ್ರೀ. ಎನ್ ಎನ್ ವಕೀಲರಿಂದ ಃ

ನಾನು 17 ವರ್ಷದಿಂದ ಎದುರುದಾರರ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಎದುರುದಾರರು ನನಗೆ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು authorization ಅನ್ನು ನೀಡಿರುತ್ತಾರೆ. ಒಂದನೇ ಪಾರ್ಟಿ ಯೂನಿಯನ್ ನೋಂದಾಯಿತ ಯೂನಿಯನ್ ಆಗಿರುತ್ತದೆ ಎಂದರೆ ಸರಿ . 2018-19 ಕ್ಕೆ ಸಂಬಂಧಪಟ್ಟಂತೆ ಒಂದನೇ ಪಾರ್ಟಿ Charter of Demands ಅನ್ನು ಸಂಸ್ಥೆ ಗೆ ನೀಡಿರುತ್ತದೆ ಎಂದರೆ ಸರಿ . ಸಂಸ್ಥೆಯು Charter of Demands ಅನ್ನು ಒಪ್ಪದೇ ಇದ್ದುದರಿಂದ ವಿವಾದವು ಲೇಬರ್ ಆಫೀಸರ್ ಮುಂದೆ ಮಧ್ಯಸ್ಥಿಕೆ ಗೆ ಹೋಗಿರುತ್ತದೆ ಎಂದರೆ ಸರಿ . ನಾನು 7-8 ಸಂದರ್ಭಗಳಲ್ಲಿ ಸದರಿ ಮಧ್ಯಸ್ಥಿಕೆಯಲ್ಲಿ ಭಾಗವಹಿಸಿರುತ್ತೇನೆ. ಮಧ್ಯಸ್ಥಿಕೆಯು 35 ರಿಂದ 40 ದಿನಾಂಕಗಳಂದು ನಡೆದಿರುತ್ತದೆ ಎಂಬ ಸೂಚನೆಗೆ ಸಾಕ್ಷಿಯು ತುಂಬಾ ಸಮಯವಾಗಿದ್ದರಿಂದ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ . ನಾನು ಭಾಗವಹಿಸದೇ ಇದ್ದ ದಿನಾಂಕಗಳಂದು ಮಧ್ಯಸ್ಥಿಕೆ ಸಂದರ್ಬದಲ್ಲಿ ಏನು ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ . ಸದರಿ ದಿನಾಂಕಗಳಂದು ನಡೆದ ಮಧ್ಯಸ್ಥಿಕೆಯ ವಿವರಗಳನ್ನು ನಾನು ನಮ್ಮ ಸಂಸ್ಥೆಯಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿ . ಮಧ್ಯಸ್ಥಿಕೆಯಲ್ಲಿ ಎದುರುದಾರರು ತಮ್ಮ ಸಂಸ್ಥೆಯ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲದ ಕಾರಣ Charter of Demands ಅನ್ನು ಒಪ್ಪಲು ಆಗುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿ . ಮಧ್ಯಸ್ಥಿಕೆಯ ಕಾಲಕ್ಕೆ ಎದುರುದಾರರು Financial Statement ಗಳನ್ನು ಹಾಜರುಪಡಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ . ಈ ಪ್ರಕರಣದಲ್ಲಿ ಸದರಿ Statement ಗಳನ್ನು ಹಾಜರುಪಡಿಸಲಾಗಿರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಕೋವಿಡ್ ನಂತರದ ಸನ್ನಿವೇಶಗಳನ್ನು ಹೇಳಿರುತ್ತೇನೆ ಎಂಬ ಸೂಚನೆಗೆ ಸಾಕ್ಷಿದಾರರ ಕೋವಿಡ್ ಮೊದಲಿನ ಮತ್ತು ನಂತರ ಸನ್ನಿವೇಶಗಳನ್ನು ಹೇಳಲಾಗಿರುತ್ತದೆ ಎಂದು ನುಡಿಯುತ್ತಾರೆ . ಒಂದನೇ ಪಾರ್ಟಿ ಯೂನಿಯನ್ ಎದುರುದಾರರ 33 ಕಾರ್ಮಿಕರು ಸದಸ್ಯರಾಗಿರುತ್ತಾರೆ ಎಂದರೆ ಸರಿ . ಒಂದನೇ ಪಾರ್ಟಿ ಯೂನಿಯನ್ ನ ಸದಸ್ಯರಲ್ಲದೇ ಇರುವ ಕಾರ್ಮಿಕರೂ ಕೂಡ ಎದುರುದಾರರ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರೆ ಸರಿ . ಒಂದನೇ ಪಾರ್ಟಿ ಯೂನಿಯನ್ ನ ಸದಸ್ಯರಲ್ಲದೇ ಕಾರ್ಮಿಕರಿಗೆ 2018-19, ಮತ್ತು 2021 ರ ನಂತರದ ವರ್ಷಗಳಲ್ಲಿ Increment ಗಳನ್ನು ನೀಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಮಧ್ಯಸ್ಥಿಕೆಯ ಕಾಲಕ್ಕೆ ಎದುರುದಾರರೂ ಕೂಡ ತಮ್ಮ ಬೇಡಿಕೆಗಳನ್ನು ಯೂನಿಯನ್ ಮುಂದೆ ಇಟ್ಟಿರುತ್ತಾರೆ ಎಂದರೆ ಸರಿ . ಆ ರೀತಿ ಇಟ್ಟಂತಹ ಬೇಡಿಕೆಗಳಲ್ಲಪಿ ಸಾಕಷ್ಟು ಬೇಡಿಕೆಗಳನ್ನು ಯೂನಿಯನ್ ಒಪ್ಪಿಕೊಂಡಿರುತ್ತದೆ ಎಂದರೆ ಸರಿ .

ಮಧ್ಯಸ್ಥಿಕೆಯ ಕಾಲಕ್ಕೆ ಕೆಲಸಗಾರರ ವೇತನವನ್ನು ಹೆಚ್ಚು ಮಾಡುವ ಬಗ್ಗೆ ಯಾವುದೇ ಒಪ್ಪಂದಕ್ಕೆ ಒಂದನೆಯ ಮತ್ತು ಎರಡನೆಯ ಪಾರ್ಟಿಯವರು ಬರಲು ಸಾಧ್ಯವಾಗಿರುವುದಿಲ್ಲ ಎಂದರೆ ಸರಿ . ಸದರಿ ಒಪ್ಪಂದಕ್ಕೆ ಬಾರದೇ ಇರಲು ಎದುರುದಾರರ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ ಎಂದು ಎದುರುದಾರರು ಹೇಳಿದ್ದರಾಗಿರುತ್ತದೆ ಎಂಬ ಸೂಚನೆಗೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ . ಎದುರುದಾರರು ಕೆಲಸಗಾರರಿಗೆ ವೇತನವನ್ನು ಹೆಚ್ಚು ಮಾಡಲು ಇಷ್ಟವಿಲ್ಲದೇ ಇದ್ದುದರಿಂದ ಸದರಿ ಸುಳ್ಳು ಕಾರಣವನ್ನು ಹೇಳಿ ಅದನ್ನು ತಪ್ಪಿಸಿರುತ್ತಾರೆ ಎಂದರೆ ಸರಿಯಲ್ಲ . ಒಂದನೇ ಪಾರ್ಟಿ ತಮ್ಮ Charter of Demands ನಲ್ಲಿ ಮಾಡಿದಂತಹ ಎಲ್ಲಾ ಬೇಡಿಕೆಗಳು ವೈಜ್ಞಾನಿಕವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಒಂದನೇ ಪಾರ್ಟಿಯ ಬೇಡಿಕೆಗಳನ್ನು ಎರಡನೇಪಾರ್ಟಿಯು ಮಾನ್ಯ ಮಾಡಬೇಕಾಗಿತ್ತು ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),<br>
ಅಧ್ಯಕ್ಷಾಧಿಕಾರಿಗಳು/ಜಡ್ಜ್<br>
ಔದ್ಯಮಿಕ ನ್ಯಾಯಾಧೀಕರಣ,<br>
ಮೈಸೂರು.